**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂಃ 271/2019 ಸಿ.ಡಬ್ಲ್ಯೂ–4 ಪಿ.ಡಬ್ಲ್ಯೂ-4**

| | | |
|---|---|---|
| **ಹೆಸರು** | ಃ | **ಸುಭಾಷ** |
| ತಂದೆಃ ಗಂಡ | ಃ | ಸಿದ್ರಾಮ |
| **ವಯಸ್ಸು** | ಃ | **38 ವರ್ಷ** |
| **ಉದ್ಯೋಗ** | : | ಖಾಸಗಿ ಕೆಲಸ |
| **ವಾಸಸ್ಥಳ** | ಃ | ಹೊನ್ನಳ್ಳಿ |

**ದಿನಾಂಕಃ 04.09.2025**

**ಸತ್ಯ ಪ್ರತಿಜ್ಞೆಯ ಮೇರೆಗೆ**

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರು ಪರಿಚಯ ಇರುತ್ತಾರೆ. ಚಾಸಾ 1 ನನ್ನ ತಾಯಿ, ಚಾಸಾ 5 ನನ್ನ ಸಹೋದರ, ಚಾಸಾ 6 ನನ್ನ ಚಿಕ್ಕಮ್ಮ, ಚಾಸಾ 2, 3 ಮತ್ತು 7 ಪರಿಚಯ ಇರುತ್ತಾರೆ.

ದಿಃ 16-04-2018 ನಮ್ಮ ಊರಿನಲ್ಲಿ ಅಂಬೇಡ್ಕರ ಜಯಂತಿ ಕಾರ್ಯಕ್ರಮ ನಡೆದಿತ್ತು. ಆ ಸಂದರ್ಭದಲ್ಲಿ ನಾನು ಎಲ್ಲಾ ಗ್ರಾಮಸ್ಥರಿಗೆ ಊಟ ಬಡಿಸುತ್ತಿದ್ದೇನು. ಆಗ ನಾನು ಗ್ರಾಮಸ್ಥರಿಗೆ ಇನ್ನು ಜನರು ಬಹಳ ಇದ್ದು ಬೇಗ ಬೇಗ ಊಟ ಮಾಡಿರಿ ಅಂತಾ ಹೇಳಿದ್ದ ಕಾರಣ ಹಳೆಯ ದ್ವೇಷದಿಂದ ನನ್ನನ್ನು 1 ನೇ ಆರೋಪಿಯು ತಲೆಯ ಮೇಲೆ, ಬೆನ್ನ ಮೇಲೆ ಹೊಡೆದಿದ್ದು, ಕಲ್ಲು ತೆಗೆದುಕೊಂಡು ತಲೆಯ ಮೇಲೆ ಹೋಡೆದಿರುತ್ತಾರೆ. ಆಗ ಜಗಳ ಬಿಡಿಸಲು ಬಂದ ಚಾಸಾ 5 ರವರನ್ನು 2 ನೇ ಆರೋಪಿಯು ಕಟ್ಟಿಗೆ ತೆಗೆದುಕೊಂಡು ಎಡಗೈ ಮೇಲೆ ಹೋಡೆದಿರುತ್ತಾರೆ. ಆಗ ಚಾಸಾ 1 ರವರು ಜಗಳ ಬಿಡಿಸಲು ಬಂದಾಗ ನಾಗಪ್ಪಾ ಭೀಮಾನೆಯವರು ನೂಕಿಸಿರುತ್ತಾರೆ. ಆ ಚಾಸಾ 6 ಮತ್ತು 7 ರವರು ಜಗಳ ಬಿಡಿಸಲು ಬಂದಾಗ ಆರೋಪಿತರು ನಮಗೆ ಇದೊಂದು ಬಾರಿ ಉಳಿದಿದ್ದಿರಿ ಇನ್ನೊಮ್ಮೆ ಸಿಕ್ಕರೇ ಜೀವಸಹಿತ ಬಿಡುವುದಿಲ್ಲ ಅಂತಾ ಜೀವಬೆದರಿಕೆ ಹಾಕಿರುತ್ತಾರೆ. ನಾನು ಎಲ್ಲಾದರು ಹೋಗಬೇಕಾದರೆ ನನಗೆ ಜೀವಬೆದರಿಕೆ ಇರುತ್ತದೆ.

**(ಈ ಹಂತದಲ್ಲಿ ಮಾನ್ಯ ಅಭಿಯೋಕರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿಸಿದ್ದ ರಿಂದ ನೀಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ